# ಕರ್ನಾಟಕ ವಿಧಾನಪರಿಷತ್ತು

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಎಂ ನಾಗರಾಜು
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 786 (855)
ಉತ್ತರಿಸಬೇಕಾದ ದಿನಾಂಕ : 24.08.2026
ಉತ್ತರಿಸಬೇಕಾದವರು : ಮಾನ್ಯ ಮುಖ್ಯಮಂತ್ರಿಯವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರಿ ಸೇವೆಗಳಲ್ಲಿ ನಾಗರಿಕರಿಗೆ "Right to Time Bound Services" ಅನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸರ್ಕಾರದ ಕ್ರಮಗಳೇನು; | ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಮತ್ತು (ತಿದ್ದುಪಡಿ) ಅಧಿನಿಯಮ, 2014ರ ಅಡಿ ಅಧಿಸೂಚಿತಗೊಂಡಿರುವ ನಾಗರೀಕ ಸೇವೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗತ್ತಿದೆ.<br>1. ಸಕಾಲ ಅಧಿಸೂಚಿತ ಎಲ್ಲಾ ಸೇವೆಗಳನ್ನು **ಆನ್-ಲೈನ್ ಮೂಲಕ** ನಾಗರೀಕರಿಗೆ ಒದಗಿಸಲು ಕ್ರಮಕೈಗೊಳ್ಳಲಾಗುತ್ತಿದೆ.<br>2. ನಾಗರೀಕರಿಗೆ ಸುಲಭವಾಗಿ ಸೇವೆಗಳ ಮಾಹಿತಿಯನ್ನು ಒದಗಿಸಲು AI ಆಧಾರಿತ interactive **ಸಕಾಲ ಜಾಲತಾಣವನ್ನು** ಅಭಿವೃದ್ಧಿಪಡಿಸಲಾಗುತ್ತಿದೆ.<br>3. ನಾಗರೀಕರಿಂದ ಸೇವೆಗಳ ಗುಣಮಟ್ಟದ ಬಗ್ಗೆ ಅಭಿಪ್ರಾಯ ಪಡೆಯಲು ಮತ್ತು ಮೇಲ್ಮನವಿ ದಾಖಲಿಸಲು AI ಆಧಾರಿತ 24*7 **ಸಕಾಲ ಕಾಲ್-ಸೆಂಟರ್** ಅನ್ನು ಅಭಿವೃದ್ಧಿಪಡಿಸಲು ಕ್ರಮಕೈಗೊಳ್ಳಲಾಗುತ್ತಿದೆ.<br>4. ಸಕಾಲ ಅಧಿಸೂಚಿತ ಸೇವೆಗಳನ್ನು ಕನಿಷ್ಟ ಅವಧಿಯೊಳಗೆ ನಾಗರೀಕರಿಗೆ ತಲುಪಿಸುವ ನಿಟ್ಟಿನಲ್ಲಿ ಸೇವೆಗಳನ್ನು ಸರಳೀಕರಣಗೊಳಿಲು ಸೇವಾ ಪ್ರಕ್ರಿಯಾ ಮರು ವಿನ್ಯಾಸಕ್ಕೆ (BPR) ಒಳಪಡಿಸಲಾಗುತ್ತಿದೆ. |
| ಆ | ಇಲಾಖೆಗಳ ಕಾರ್ಯಕ್ಷಮತೆಯನ್ನು ಅಳೆಯಲು Key Performance Indicators (KPIs) ಮತ್ತು ವಾರ್ಷಿಕ ಕಾರ್ಯಕ್ಷಮತಾ ಮೌಲ್ಯಮಾಪನ ವ್ಯವಸ್ಥೆ ಜಾರಿಯಲ್ಲಿದೆಯೇ; | ಸಕಾಲ ಅಧಿಸೂಚಿತ ಸೇವೆಗಳ ವಿತರಣೆ ಕುರಿತು ಇಲಾಖೆಗಳ ಕಾರ್ಯಕ್ಷಮತೆ ಅಳೆಯಲು Sakala Ranking System ಅನ್ನು ಅಳವಡಿಸಲಾಗಿದೆ. ಸದರಿ Ranking System ನಲ್ಲಿ ಈ ಕೆಳಕಂಡ Key Performance Indicators ಗಳನ್ನು ಅಳವಡಿಸಲಾಗಿದೆ.<br>i. ನಿಗದಿತ ಕಾಲಮಿತಿಯೊಳಗೆ ಅರ್ಜಿಗಳ ವಿಲೇವಾರಿ - 70% (Positive Weightage)<br>ii. ಅರ್ಜಿಗಳ ತಿರಸ್ಕೃತಿ - 30% (Negative Weightage) |
| ಇ | ಸರ್ಕಾರದ ವಿರುದ್ಧದ ನ್ಯಾಯಾಲಯದ ತೀರ್ಪುಗಳಿಂದ ಸಾರ್ವಜನಿಕ ಹಣದ ನಷ್ಟವನ್ನು ತಡೆಯಲು ಹೊಣೆಗಾರ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ನಿಯಮ ಇದೆಯೇ; | ಒಂದು ವೇಳೆ ಯಾವುದೇ ಅಧಿಕಾರಿಯ ನಿರ್ಲಕ್ಷ್ಯತೆಯಿಂದ ಸರ್ಕಾರದ ವಿರುದ್ಧದ ನ್ಯಾಯಾಲಯದ ತೀರ್ಪುಗಳಿಂದ ಸಾರ್ವಜನಿಕ ಹಣದ ನಷ್ಟವುಂಟಾಗಿದ್ದಲ್ಲಿ, ಆ ಅಧಿಕಾರಿಯ ವಿರುದ್ಧ ಶಿಸ್ತು ಕ್ರಮ ಜರುಗಿಸಲು ನಿಯಮಗಳಲ್ಲಿ ಅವಕಾಶ ಇರುತ್ತದೆ. |
| ಈ | 2040 ರೊಳಗೆ ರಾಜ್ಯವನ್ನು ಪಾರದರ್ಶಕ, ವೇಗವಾದ, ಡಿಜಿಟಲ್, ಜವಾಬ್ದಾರಿಯುತ ಮತ್ತು ಜನಸ್ನೇಹೀ ಆಡಳಿತ ಹೊಂದಿದ ರಾಜ್ಯವನ್ನಾಗಿಸಲು ಸರ್ಕಾರದ ಸಮಗ್ರ ಆಡಳಿತ ಸುಧಾರಣಾ ಕಾರ್ಯತಂತ್ರವೇನು? | 2040ರೊಳಗೆ ರಾಜ್ಯವನ್ನು ಪಾರದರ್ಶಕ, ವೇಗವಾದ, ಡಿಜಿಟಲ್, ಜವಾಬ್ದಾರಿಯುತ ಮತ್ತು ಜನಸ್ನೇಹೀ ಆಡಳಿತ ಹೊಂದಿದ ರಾಜ್ಯವನ್ನಾಗಿಸಲು AI ತಂತ್ರಾಂಶದ ಬಳಕೆ, ಸೇವೆಗಳ ಮರುವಿನ್ಯಾಸ, ವಿವಿಧ ಇಲಾಖೆಗಳ ತಂತ್ರಾಂಶಗಳ ಸಂಯೋಜನ, ಸಿಬ್ಬಂದಿಗಳಿಗೆ ಅವಶ್ಯಕ ತಾಂತ್ರಿಕ ತರಬೇತಿ ನೀಡಲಾಗುವುದು. |

**ಸಂಖ್ಯೆ: ಸಿಆಸುಇ/ 70 /ಎಸ್‌ಎಎಂಎಸ್/ 2026**

**(ಡಿ.ಕೆ. ಶಿವಕುಮಾರ್)**
ಮುಖ್ಯಮಂತ್ರಿ